# ಕರ್ನಾಟಕ ಸರ್ಕಾರದ ವಿಧಾನ ಪರಿಷತ್ ಸದಸ್ಯರಾದ (MLC) ಶ್ರೀ.ಎಸ್.ವಿ.ಸಂಕನೂರ ಸರ್ ರವರು ಕರ್ನಾಟಕಲ್ಲೇ ಅತಿದೊಡ್ಡ ಪ್ರಾಣಿಶಾಸ್ತ್ರ ವಸ್ತುಸಂಗ್ರಹಾಲಯವಾದ ಕೆಸಿಡಿ ಪ್ರಾಣಿಶಾಸ್ತ್ರ ವಸ್ತುಸಂಗ್ರಹಾಲಯಕ್ಕೆ ಭೇಟಿ

ಈ ದಿನ 08-02-2025ರಂದು ಕರ್ನಾಟಕ ಸರ್ಕಾರದ ವಿಧಾನ ಪರಿಷತ್ ಸದಸ್ಯರಾದ (MLC) ಶ್ರೀ.ಎಸ್.ವಿ.ಸಂಕನೂರ ಸರ್ ರವರು ಕರ್ನಾಟಕಲ್ಲೇ ಅತಿದೊಡ್ಡ ಪ್ರಾಣಿಶಾಸ್ತ್ರ ವಸ್ತುಸಂಗ್ರಹಾಲಯವಾದ ಕೆಸಿಡಿ ಪ್ರಾಣಿಶಾಸ್ತ್ರ ವಸ್ತುಸಂಗ್ರಹಾಲಯಕ್ಕೆ ಭೇಟಿ ನೀಡಿದರು. ಈ ಸಂದರ್ಭದಲ್ಲಿ ಕೆಸಿಡಿ ಪ್ರಾಣಿಶಾಸ್ತ್ರ ವಸ್ತುಸಂಗ್ರಹಾಲಯದ ಟ್ಯಾಕ್ಸಿಡರ್ಮಿಸ್ಟರಾದ ಶ್ರೀ.ನವೀನ ಪ್ಯಾಟಿಮನಿಯವರು ಎಲ್ಲ ಪ್ರಾಣಿಗಳ ಬಗ್ಗೆ ಮಾಹಿತಿ ನೀಡಿದರು.

ಶ್ರೀ.ಎಸ್.ವಿ.ಸಂಕನೂರ ಸರ್ ರವರು ಎಲ್ಲ ಪ್ರಾಣಿಗಳ ಬಗ್ಗೆ ಮಾಹಿತಿ ತಿಳಿದುಕೊಂಡು ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯದ ಪ್ರಾಣಿಶಾಸ್ತ್ರ ವಸ್ತುಸಂಗ್ರಹಾಲಯ ಬಹಳ ಅಚ್ಚುಕಟ್ಟಾಗಿದ್ದು ಬಹಳ ಅಪರೂಪವಾದ ಪ್ರಾಣಿ ಪ್ರಭೇದಗಳನ್ನು ಹೊಂದಿದೆ, ವಿಶೇಷವಾಗಿ ತರಹ ತರಹದ ಕೀಟಗಳು ಮೀನುಗಳು,ಪಕ್ಷಿಗಳು,ಸರಿಸೃಪಗಳು ಇಲ್ಲವೆ ಇಲ್ಲಿರುವಷ್ಟು ಪ್ರಾಣಿ ಪ್ರಭೇದಗಳು ರಾಜ್ಯದಲ್ಲಿ ಯಾವ ವಸ್ತುಸಂಗ್ರಹಾಲಯದಲ್ಲಿಯೂ ಇಲ್ಲ, ಈ ಪ್ರಾಣಿಶಾಸ್ತ್ರ ವಸ್ತುಸಂಗ್ರಹಾಲಯವನ್ನು ಹೀಗೆ ಅಚ್ಚುಕಟ್ಟಾಗಿ ನಿರ್ವಹಿಸಬೇಕು ಭವಿಷ್ಯದಲ್ಲಿ ವಿದ್ಯಾರ್ಥಿಗಳಿಗೆ ಕಲಿಯಲು ಈ ಕೆಸಿಡಿ ಪ್ರಾಣಿಶಾಸ್ತ್ರ ವಸ್ತುಸಂಗ್ರಹಾಲಯದ ಅವಶ್ಯಕತೆ ಬಹಳ ಇದೆ ಎಂದು ತಮ್ಮ ಅನಿಸಿಕೆಗಳನ್ನು ಹಂಚಿಕೊಂಡರು.

ಈ ಸಂದರ್ಭದಲ್ಲಿ ಹಿರಿಯರಾದ ಡಾ.ಎ.ಎ.ಹೂಲಿ ಸರ್ ಮತ್ತು ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯದ ಪ್ರಾಚಾರ್ಯರಾದ ಪ್ರೊ.ಎಮ್.ಎಸ್.ಸಾಳುಂಕೆ, ಕಾಲೇಜಿನ ಅಕಾಡೆಮಿಕ್ ಡೀನ್  ಆಗಿರುವಂತಹ ಪ್ರೊ.ಆರ್.ವಾಯ್.ಬುದಿಹಾಳ ಹಾಗೂ ಪ್ರಾಣಿಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಡಾ.ಆರ್.ಡಿ.ಸಣಕಲ್  ಮತ್ತು ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯದ ಶಿಕ್ಷಕ-ಶಿಕ್ಷಕೇತರ ಸಿಬ್ಬಂದಿಗಳು ಹಾಜರಿದ್ದರು.🙏🌱















